ಕರ್ನಾಟಕ ಸರ್ಕಾರ
ಸಹಕಾರ ಚುನಾವಣಾ ಪ್ರಾಧಿಕಾರ

ಸಂಖ್ಯೆ: ಸಚುಪ್ರಾ/ಆಡಳಿತ/ಚುನಾವಣೆ/ತಿದ್ದುಪಡಿ/39/2015

3ನೇ ಮಹಡಿ, ಟಿ.ಟಿ.ಎಂ.ಸಿ.ಕಟ್ಟಡ "ಎ"ಬ್ಲಾಕ್,
ಶಾಂತಿನಗರ, ಬೆಂಗಳೂರು-560027
ದಿನಾಂಕ:09.10.2015

## -:ಅಧಿಸೂಚನೆ:-

ವಿಷಯ:- 2015ನೇ ಸಾಲಿನಲ್ಲಿ ಪದಾವಧಿ ಮುಗಿಯಲಿರುವ ಅಪೆಕ್ಸ್ ಸಹಕಾರ ಸಂಘಗಳ ಆಡಳಿತ ಮಂಡಲಿಗಳಿಗೆ ಚುನಾವಣೆ ನಡೆಸಲು ಪರಿಷ್ಕೃತ ಅಧಿಸೂಚನೆ ಹೊರಡಿಸುವ ಬಗ್ಗೆ.

ಉಲ್ಲೇಖ:-
1) ಪ್ರಾಧಿಕಾರದ ಅಧಿಸೂಚನೆ ಸಂಖ್ಯೆ :ಸ.ಚು.ಪ್ರಾ/ಆಡಳಿತ/ ಚುನಾವಣೆ/ 96/2014-15 ದಿನಾಂಕ : 05.03.2015 ಮತ್ತು 08.04.2015
2) ಸಹಕಾರ ಚುನಾವಣಾ ಪ್ರಾಧಿಕಾರದ ಆದೇಶ ಸಂಖ್ಯೆ:ಸಚುಪ್ರಾ/ ಚುನಾವಣೆ/ಜಿಚುಅ/ಅಪೆಕ್ಸ್/104/2014 ದಿನಾಂಕ:05.03.2015
3) ಸಹಕಾರ ಚುನಾವಣಾ ಪ್ರಾಧಿಕಾರದ ಆದೇಶ ಸಂಖ್ಯೆ:ಸಚುಪ್ರಾ/ ಚುನಾವಣೆ/ಅಪೆಕ್ಸ್/ಸ.ಜಿ.ಚು.ಅ/41/2015 ದಿನಾಂಕ:10.06.2015 ಮತ್ತು 18.06.2015
4) ಪ್ರಾಧಿಕಾರದ ಅಧಿಸೂಚನೆ ಸಂಖ್ಯೆ ಸಂಖ್ಯೆ:ಸಚುಪ್ರಾ/ಆಡಳಿತ/ ಚುನಾವಣೆ/ ತಿದ್ದುಪಡಿ/39/2015 ದಿನಾಂಕ:20.07.2015
5) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ತೋಟಗಾರಿಕಾ ಮಹಾಮಂಡಳ ನಿ. ಬೆಂಗಳೂರು ಸಂಬಂಧ ಹೊರಡಿಸಲಾದ ಅಧಿಸೂಚನೆ ಸಂಖ್ಯೆ:ಕೆಹೆಚ್‌ಎಫ್/ವಿನಿ/32/2015/342 ದಿನಾಂಕ:23.09.2015
6) ಪ್ರಾದೇಶಿಕ ಆಯುಕ್ತರವರ ಪತ್ರ ಸಂಖ್ಯೆ:ಚುನಾವಣೆ/ವಿವ/37(ಬಿ12)/2014-15 ದಿನಾಂಕ:18-09-2015 ಮತ್ತು 06.10.2015
7) ಸಹಕಾರ ಚುನಾವಣಾ ಪ್ರಾಧಿಕಾರದ ಪತ್ರ ಸಂಖ್ಯೆ:ಸಚುಪ್ರಾ/ ಬೆಂ.ವಿ/ ರಿಆನೇ-ಆಮಂ/2567/2015 ದಿನಾಂಕ:12.08.2015
8) ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ರವರ ಪತ್ರ ಸಂಖ್ಯೆ: ಕೆ.ಜ.ಇ/ ಜಂ.ರಿ/ಕ.ರಾ.ರೇ.ಸ.ಮಾ.ಮ-ರಿ.ಫಂ/55/2015-16ದಿನಾಂಕ: 25.08.2015
9) ಪ್ರಾಧಿಕಾರದ ಪತ್ರ ಸಂಖ್ಯೆ:ಸಚುಪ್ರಾ/ಬೆಂ.ವಿ/2015-20/2015 ದಿನಾಂಕ: 18.09.2015
10) ಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿ., ಬೆಂಗಳೂರು ರವರ ಪತ್ರ ಸಂಖ್ಯೆ:ಸಿಬ್ಬಂದಿ/ 588/2015-16 ದಿನಾಂಕ:15.09.2015

★★★★★

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(1)ರ ದಿನಾಂಕ:05.03.2015ರಲ್ಲಿ ಅಧಿಸೂಚನೆ ಹೊರಡಿಸಿ, ನಂತರ 08.04.2015ರಲ್ಲಿ ತಿದ್ದುಪಡಿ ಅಧಿಸೂಚನೆಯನ್ನು ಹೊರಡಿಸಿ ಆದೇಶಿಸಿ ಅದರಂತೆ ಪ್ರಾಥಮಿಕ ಸಂಘಗಳ ಸದಸ್ಯತ್ವ ಹೊಂದಿದ್ದ ಅಪೆಕ್ಸ್ ಸಂಘಗಳ/ಮಹಾಮಂಡಲಿಗಳ ಚುನಾವಣೆಯನ್ನು ದಿನಾಂಕ: 18.07.2015 ಮತ್ತು 19.07.2015ರಂದು ಚುನಾವಣೆಯನ್ನು ನಡೆಸಲು ದಿನಾಂಕಗಳನ್ನು ಗೊತ್ತುಪಡಿಸಲಾಗಿತ್ತು. ಫೆಡರಲ್ ಸಂಘಗಳ ಪ್ರತಿನಿಧಿಗಳ ಮುಖಾಂತರ ಚುನಾವಣೆಯನ್ನು ನಡೆಸುವ ಅಪೆಕ್ಸ್ ಸಂಘಗಳ ಚುನಾವಣಾ ದಿನಾಂಕಗಳನ್ನು ಕ್ರಮವಾಗಿ ದಿನಾಂಕ:01.08.2015 ಮತ್ತು 02.08.2015, ನಂತರ 07.11.2015 ಮತ್ತು 08.11.2015ರಂದು ದಿನಾಂಕಗಳನ್ನು ಗೊತ್ತುಪಡಿಸಲಾಗಿತ್ತು. ಅದರಂತೆ ನಿಯಮಾನುಸಾರ ಚುನಾವಣೆಯನ್ನು ನಡೆಸಲು ಸಾಧ್ಯವಾಗದ ಕಾರಣ ಉಲ್ಲೇಖ(4)ರಲ್ಲಿ ಪರಿಷ್ಕೃತ ಅಧಿಸೂಚನೆ ಹೊರಡಿಸಿ, ದಿನಾಂಕ:12.09.2015 ಮತ್ತು 13.09.2015 ನಂತರ ದಿನಾಂಕ:19.09.2015/20.09.2015 ದಿನಾಂಕಗಳಲ್ಲಿ06 ಮಹಾಮಂಡಳಗಳ ಚುನಾವಣೆಯನ್ನು ನಡೆಸಲು ಗೊತ್ತುಪಡಿಸಲಾಗಿತ್ತು.ಅವುಗಳ ಪೈಕಿ ಕರ್ನಾಟಕ ರಾಜ್ಯ ಕೈಗಾರಿಕಾ ಸರಬರಾಜು ಮತ್ತು ಮಾರಾಟ ಮಹಾಮಂಡಳ ನಿ., ಬೆಂಗಳೂರು ಇದರ ಚುನಾವಣೆಯು ನಿಗದಿಪಡಿಸಿದ ದಿನಾಂಕ:13.09.2015ರಂದು ಪೂರ್ಣಗೊಂಡಿರುತ್ತದೆ. ಇದನ್ನು ಹೊರತುಪಡಿಸಿ ಉಳಿದ ಇತರೆ 05 ಮಹಾಮಂಡಳಿಗಳು ಸರಿಯಾದ ಮತದಾರರ ಪಟ್ಟಿಯನ್ನು ಸಲ್ಲಿಸದ ಕಾರಣ ಅವುಗಳ ಚುನಾವಣೆಗಳು ನಿಗದಿತ ಸಮಯಕ್ಕೆ ಪೂರ್ಣಗೊಂಡಿರುವುದಿಲ್ಲ. ಅವುಗಳ ವಿವರ ಈ ಕೆಳಗಿನಂತಿರುತ್ತವೆ.

1) ಕರ್ನಾಟಕ ರಾಜ್ಯ ಸಹಕಾರ ತೆಂಗಿನ ನಾರಿನ ಮಹಾಮಂಡಳ ನಿಯಮಿತ, ರಾಜಾಜಿನಗರ, ಬೆಂಗಳೂರು.
2) ಕರ್ನಾಟಕ ರಾಜ್ಯ ತೋಟಗಾರಿಕಾ ಮಹಾಮಂಡಳ ನಿ. ಬೆಂಗಳೂರು
3) ಕರ್ನಾಟಕ ರಾಜ್ಯ ಸಹಕಾರ ಕೈಗಾರಿಕಾ ಮಹಾಮಂಡಳ ನಿ., ಬೆಂಗಳೂರು
4) ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿ., ಬೆಂಗಳೂರು
5) ಕರ್ನಾಟಕ ರಾಜ್ಯ ರೇಷ್ಮೆ ಸಹಕಾರ ಮಾರಾಟ ಮಹಾಮಂಡಳ ನಿ., ಬೆಂಗಳೂರು

ಮೇಲ್ಕಂಡ 05 ಮಹಾಮಂಡಳಿಗಳ ಪೈಕಿ 04 ಮಹಾಮಂಡಳಿಗಳಿಗೆ ಈಗಾಗಲೇ ರಿಟರ್ನಿಂಗ್ ಆಫೀಸರ್/ಸಹಾಯಕ ರಿಟರ್ನಿಂಗ್ ಆಫೀಸರ್ ಮತ್ತು ಮತದಾರರ ಪಟ್ಟಿಯ ಪರಿಶೀಲನಾಧಿಕಾರಿಗಳನ್ನು ನೇಮಕಾತಿ ಮಾಡಲಾಗಿರುತ್ತದೆ. ಈ 05 ಮಹಾಮಂಡಳಿಗಳಿಗೆ ಚುನಾವಣೆಯನ್ನು ಈ ಕೆಳಕಂಡ ಕಾರಣಗಳಿಂದ ನಿಗದಿಪಡಿಸಿದ ದಿನಾಂಕಗಳಲ್ಲಿ ಚುನಾವಣೆ ನಡೆಸಲು ಸಾಧ್ಯವಾಗಿರುವುದಿಲ್ಲ. ಪ್ರಾಧಿಕಾರದಿಂದ ಸಂಖ್ಯೆ:ಸಚುಪ್ರಾ/ಆಡಳಿತ/ಚುನಾವಣೆ/ತಿದ್ದುಪಡಿ/39/2015 ದಿನಾಂಕ: 20.7.2015 ಅಧಿಸೂಚನೆ ಹೊರಡಿಸಿರುವಾಗ ಈ ಕೆಳಕಂಡ ಕಾರಣಗಳನ್ನು ನೀಡಲಾಗಿತ್ತು.

- **ಕರ್ನಾಟಕ ರಾಜ್ಯ ಸಹಕಾರ ತೆಂಗಿನ ನಾರಿನ ಮಹಾಮಂಡಳ ನಿಯಮಿತ, ಬೆಂಗಳೂರು:-** ಪ್ರಾಧಿಕಾರದಿಂದ ಕ್ರಮವಾಗಿ ದಿ:29.10.2014, 23.05.2015 ಮತ್ತು 3.07.2015 ರಂದು ಅಪರ ನಿಬಂಧಕರು, ಕೈಗಾರಿಕೆ ಮತ್ತು ಹೈನುಗಾರಿಕೆ ಮತ್ತು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಇವರುಗಳಿಗೆ ಪತ್ರಗಳನ್ನು ಬರೆಯಲಾಗಿದ್ದು, ಅವುಗಳ ವಿವರ ಈ ಕೆಳಕಂಡಂತಿರುತ್ತದೆ.

ದಿ:29.10.2014 ರಂದು ಬರೆದ ಪತ್ರದಲ್ಲಿ ಸದರಿ ಮಹಾಮಂಡಳದ ಬಗ್ಗೆ ಬಂದಿರುವ ದೂರು ಅರ್ಜಿಗಳನ್ನು ಲಗತ್ತಿಸಿ ಕಳುಹಿಸಿ ಬರೆದ ಪತ್ರದಲ್ಲಿ 2015 ನೇ ಸಾಲಿನಲ್ಲಿ ಮಹಾಮಂಡಳದ ಚುನಾವಣೆಯನ್ನು ನಿಯಮಾನುಸಾರ ಮುಕ್ತವಾಗಿ ಮತ್ತು ಪಾರದರ್ಶಕವಾಗಿ ನಡೆಸುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಬೇಕಾಗಿದ್ದು, ಸದರಿ ದೂರು ಅರ್ಜಿಯ ಎಲ್ಲಾ ಅಂಶಗಳ ಬಗ್ಗೆ ವಸ್ತುನಿಷ್ಟ ವರದಿಯನ್ನು ಸದಸ್ಯತ್ವ ಹೊಂದಿದ 22 ಸಹಕಾರ ಸಂಘಗಳ ಪಟ್ಟಿ ಹಾಗೂ ಸಂಘಗಳ ನಿಯಮ 13 (ಡಿ) ಮಾಹಿತಿಯನ್ನು ಚುನಾವಣಾ ಪ್ರಾಧಿಕಾರಕ್ಕೆ 10 ದಿವಸದೊಳಗೆ ಕಳುಹಿಸಿಕೊಡಲು ತಿಳಿಸಲಾಗಿರುತ್ತದೆ. ತದನಂತರ ದಿನಾಂಕ:23.5.2015 ರಲ್ಲಿ ಬರೆದ ಪತ್ರದಲ್ಲಿ ಸಕ್ಷಮ ಅಪರ ನಿಬಂಧಕರು ತಮ್ಮ ಅಧೀನ ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ನಿರ್ದೇಶನ ನೀಡುವ ಮುಖಾಂತರ ಕಾರ್ಯನಿರತ ಸರಿಯಾದ ಸಂಘಗಳ ಮಾಹಿತಿ ಪಡೆದು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಒದಗಿಸುವ ಮುಖಾಂತರ ಜಿಲ್ಲಾ ಚುನಾವಣಾಧಿಕಾರಿಗಳಿಗೆ ಮತದಾರರ ಪಟ್ಟಿ ಕಳುಹಿಸಿ ಪರಿಶೀಲನೆಗೆ ಅವಕಾಶ ಮಾಡಿಕೊಟ್ಟು ಚುನಾವಣೆಯನ್ನು ಸಕಾಲಕ್ಕೆ ನಡೆಸುವ ಬಗ್ಗೆ ಅಗತ್ಯ ಕ್ರಮ ಕೈಗೊಂಡು ಚುನಾವಣಾ ಪ್ರಾಧಿಕಾರಕ್ಕೆ ಮತ್ತು ಜಿಲ್ಲಾ ಚುನಾವಣಾಧಿಕಾರಿಗಳಿಗೆ ವರದಿಸಲು ತಿಳಿಸಲಾಗಿದೆ.

ನಂತರ ದಿ: 3.07.2015 ರಂದು ಬರೆದ ಪತ್ರದಲ್ಲಿ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಪ್ರಾದೇಶಿಕ ಆಯುಕ್ತರಿಗೆ ಮತ್ತು ಪರಿಶೀಲನಾಧಿಕಾರಿಯವರಿಗೆ ಸರಿಯಾದ ಮತದಾರರ ಪಟ್ಟಿ ತಯಾರಿಸಿ ಕಳುಹಿಸಿದ ನಂತರ ನಿಮ್ಮ ಮಹಾಮಂಡಳದ ಚುನಾವಣಾ ದಿನಾಂಕವನ್ನು ಪ್ರತ್ಯೇಕವಾಗಿ ನಿಗದಿಪಡಿಸುವ ಬಗ್ಗೆ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಲಾಗಿದ್ದರ ಬಗ್ಗೆ ಪ್ರಸ್ತಾಪಿಸಿ ಪ್ರಾಧಿಕಾರದಿಂದ ನಿಗದಿಪಡಿಸಿರುವ ದಿನಾಂಕದೊಳಗೆ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿಯವರು ಸರಿಯಾದ ಮತದಾರರ ಪಟ್ಟಿ ಸಲ್ಲಿಸದ ಕಾರಣ ಈಗಾಗಲೇ ಅಧಿಸೂಚನೆ ಹೊರಡಿಸಿದ ದಿನಾಂಕಗಳಂದು ಚುನಾವಣೆ ನಡೆಸಲು ಸಾಧ್ಯವಾಗುವುದಿಲ್ಲ ಎಂಬ ಅಂಶವನ್ನು ಸ್ಪಷ್ಟಪಡಿಸಿ ಸರಿಯಾದ ಮತದಾರರ ಪಟ್ಟಿ ಸಲ್ಲಿಸಿ ಚುನಾವಣಾ ದಿನಾಂಕವನ್ನು ನಿಗದಿಪಡಿಸಲು ಅಗತ್ಯ ಕ್ರಮಕೈಗೊಳ್ಳಲು ತಿಳಿಸಲಾಗಿದೆ. ಅದರಂತೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಸದರಿ ಪತ್ರಕ್ಕೆ ಸ್ಪಷ್ಟೀಕರಣ ನೀಡಿ ದಿ:8.07.2015 ರಂದು ಪ್ರಾಧಿಕಾರಕ್ಕೆ ವಿವರಗಳನ್ನು ಸಲ್ಲಿಸಿರುತ್ತಾರೆ. ಈ ಕಾರಣದಿಂದಾಗಿ ಪ್ರಾಧಿಕಾರದಿಂದ ದಿನಾಂಕ 08.04.2015ರಂದು ಹೊರಡಿಸಿದ ಅಧಿಸೂಚನೆಯಂತೆ ನಿಯಮಾನುಸಾರ ಚುನಾವಣೆ ನಡಸಲು ಸಾಧ್ಯವಾಗಿರುವುದಿಲ್ಲ ಎಂಬುದಾಗಿ ತಿಳಿಸಿ, ಚುನಾವಣೆಯನ್ನು ನಡೆಸಲು ಈ ಕೆಳಕಂಡ ದಿನಾಂಕಗಳನ್ನು ಗೊತ್ತುಪಡಿಸಲಾಗಿತ್ತು.

| ಕ್ರಮ ಸಂಖ್ಯೆ | ಸಹಕಾರ ಸಂಘಗಳ ವರ್ಗ | ಚುನಾವಣೆ ನಡೆಸಲು ಗೊತ್ತುಪಡಿಸಿದ ದಿನಾಂಕ / ಅವಧಿ |
|---|---|---|
| | ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ-39ಎ(2)(ಡಿ), ರೀತ್ಯಾ ನಾಲ್ಕನೇ ಹಂತದ ಅಪೆಕ್ಸ್ ಸಂಘಗಳ ಚುನಾವಣೆ ನಡೆಸಲು ಗೊತ್ತುಪಡಿಸಲಾದ ದಿನಾಂಕಗಳು. | |

---3

| | | |
|---|---|---|
| 3(ಬಿ) | ರಾಜ್ಯಾದ್ಯಂತ ಕಾರ್ಯವ್ಯಾಪ್ತಿ ಹೊಂದಿರುವ – ಅಪೆಕ್ಸ್‌ಸಂಘಗಳ ಚುನಾವಣೆ ನಡೆಸಲು ಗೊತ್ತುಪಡಿಸಲಾದ ದಿನಾಂಕಗಳು. | ದಿನಾಂಕ :12.09.2015 / 13.09.2015<br>ಅಥವಾ<br>ದಿನಾಂಕ 19.09.2015 / 20.09.2015ರ ಮೇಲೆ ನಮೂದಿಸಿದ ದಿನಾಂಕಗಳಲ್ಲಿ ಸೂಕ್ತವೆನಿಸಿದ ದಿನಾಂಕದಂದು ಚುನಾವಣೆ ನಡೆಸತಕ್ಕದ್ದಾಗಿದೆ. |
| 3(ಸಿ) | ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ., ಬೆಂಗಳೂರು. | ದಿನಾಂಕ : 07.11.2015 ಅಥವಾ 08.11.2015 ಮೇಲೆ ನಮೂದಿಸಿದ ದಿನಾಂಕಗಳಲ್ಲಿ ಸೂಕ್ತವೆನಿಸಿದ ದಿನಾಂಕದಂದು ಚುನಾವಣೆ ನಡೆಸತಕ್ಕದ್ದಾಗಿದೆ. |

ನಂತರ ಉಲ್ಲೇಖ(6)ರಲ್ಲಿ ಪ್ರಾದೇಶಿಕ ಆಯುಕ್ತರು ಪ್ರಾಧಿಕಾರಕ್ಕೆ ಬರೆದಿರುವ ಪತ್ರದಲ್ಲಿ ಮಹಾಮಂಡಳದವರು ಮತದಾರರ ಪಟ್ಟಿಗೆ ಸ್ವೀಕೃತವಾಗಿರುವ 08 ಆಕ್ಷೇಪಣಾ ಅರ್ಜಿಗಳಿಗೆ ಸಂಬಂಧಿಸಿದಂತೆ ಮಹಾಮಂಡಳದ ಅಭಿಪ್ರಾಯವನ್ನು ಸಲ್ಲಿಸಿರುವ ಬಗ್ಗೆ ತಿಳಿಸಿ, ಸದರಿ ಆಕ್ಷೇಪಣೆಗಳ ಬಗ್ಗೆ ಸಂಬಂಧಪಟ್ಟವರಿಗೆ ವಿಚಾರಣೆಗೆ ಅವಕಾಶ ನೀಡಿ, ಸೂಕ್ತ ಪರಿಶೀಲನೆ ನಡೆಸಿ ಆಕ್ಷೇಪಣೆಗಳನ್ನು ವಿಲೇವಾರಿ ಮಾಡುವ ಬಗ್ಗೆ ಕ್ರಮ ಕೈಗೊಳುವುದು ಅಗತ್ಯವಾಗಿರುತ್ತದೆ. ಅಲ್ಲದೆ ಮಹಾಮಂಡಳದಿಂದ ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸುವ ದಿನಾಂಕಕ್ಕೆ ಸುಸ್ತಿಯಾಗುವವರ ವಿವರವನ್ನು ಮತ್ತು ಡೆಲಿಗೇಟ್ಸ್ ನಮೂನೆಗಳನ್ನು ಸಹ ಒದಗಿಸಿರುವುದಿಲ್ಲ. ಸದಸ್ಯ ಸಂಘಗಳಿಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಹಾಗೂ ಸದರಿ ಜಿಲ್ಲೆಗಳ ಸಹಕಾರ ಸಂಘಗಳ ಉಪನಿಬಂಧಕರುಗಳ ಸಭೆಯನ್ನು ಕರೆದು, ಮೇಲ್ಕಂಡ ಅಂಶಗಳ ಬಗ್ಗೆ ಚರ್ಚಿಸಿ ಹಾಗೂ ಆಕ್ಷೇಪಣೆಗಳ ಬಗ್ಗೆ ಕೂಲಂಕಷವಾಗಿ ವಿಚಾರಣೆ ನಡೆಸಿ, ಅಗತ್ಯ ಪರಿಶೀಲನೆ ನಡೆಸಿ ಸೂಕ್ತ ತೀರ್ಮಾನ ಕೈಗೊಳ್ಳಬೇಕಾಗಿರುತ್ತದೆ ಮತ್ತು ಅನರ್ಹ ಮತದಾರರ ಪಟ್ಟಿಯಲ್ಲಿರುವ ಸದಸ್ಯ ಸಂಘಗಳ ಸ್ಥಿತಿಗತಿಯ ಬಗ್ಗೆ ಇತ್ತೀಚಿನ ವರದಿಯನ್ನು ಪಡೆದು ಪರಿಶೀಲಿಸಬೇಕಾಗಿರುತ್ತದೆ ಎಂದು ತಿಳಿಸಿ ಮಹಾಮಂಡಳದ ಚುನಾವಣೆಯನ್ನು ಪಾರದರ್ಶಕವಾಗಿ ನಡೆಸಲು ಮೂರು ತಿಂಗಳ ಕಾಲಾವಕಾಶ ನೀಡಿ ಚುನಾವಣೆ ದಿನಾಂಕ ನಿಗಧಿಪಡಿಸಲು ಕೋರಿರುತ್ತಾರೆ.

**ಮೇಲಿನ ಕಂಡಿಕೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಉಲ್ಲೇಖ(4)ರಲ್ಲಿ ಹೊರಡಿಸಿದ ಅಧಿಸೂಚನೆಯಂತೆಯೂ ಸಹ ನಿಗದಿತ ದಿನಾಂಕಗಳಲ್ಲಿ ಚುನಾವಣೆ ನಡೆಸಲು ಸಾಧ್ಯವಾಗಿರುವುದಿಲ್ಲ.**

- **ಕರ್ನಾಟಕ ರಾಜ್ಯ ತೋಟಗಾರಿಕಾ ಮಹಾಮಂಡಳ ನಿ. ಬೆಂಗಳೂರು:-** ದಿನಾಂಕ:20.06.2015ರಂದು ಪ್ರಾಧಿಕಾರಕ್ಕೆ ನೇರವಾಗಿ ಕರಡು ಮತದಾರರ ಪಟ್ಟಿ ಸಲ್ಲಿಸಿರುತ್ತಾರೆ. ಪ್ರಾಧಿಕಾರದಿಂದ ದಿನಾಂಕ:25.06.2015ರಂದು ಹೊರಡಿಸಿರುವ ಅಧಿಸೂಚನೆಯಲ್ಲಿ ಸಹಕಾರ ಸಂಘಗಳ ಅಧಿನಿಯಮ 1959 ಮತ್ತು ನಿಯಮಗಳು 1960, ನಿಯಮ 13(3)ರಂತೆ ಕರ್ನಾಟಕ ರಾಜ್ಯ ತೋಟಗಾರಿಕಾ ಮಹಾಮಂಡಳ ನಿ., ಬೆಂಗಳೂರು ಇದರ ಕಾರ್ಯವ್ಯಾಪ್ತಿಯನ್ನು ಒಂದು ಮತಕ್ಷೇತ್ರವೆಂದು ನಿರ್ಧರಿಸಿ, ಮಹಾಮಂಡಳದ ಸದಸ್ಯತ್ವ ಹೊಂದಿರುವ ಎಲ್ಲಾ ಹಾಪ್‌ಕಾಮ್ಸ್‌ಗಳ ಪ್ರತಿನಿಧಿಗಳ ಮುಖಾಂತರ 19 ನಿರ್ದೇಶಕರುಗಳನ್ನು ಆಯ್ಕೆ ಮಾಡಿ ಅದರಂತೆ ಚುನಾವಣೆ ನಡೆಸಲು ಜಿಲ್ಲಾ ಚುನಾವಣಾಧಿಕಾರಿ ಮತ್ತು ರಿಟರ್ನಿಂಗ್ ಆಫೀಸರ್‌ಗಳಿಗೆ ತಿಳಿಸಿ, ಅಧಿಸೂಚನೆ ಹೊರಡಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಪ್ರಾಧಿಕಾರದಿಂದ ದಿನಾಂಕ:05.03.2015 ಮತ್ತು 08.04.2015ರಂದು ಹೊರಡಿಸಲಾದ ಅಧಿಸೂಚನೆಗಳನ್ವಯ ನಿಯಮಾನುಸಾರ ಚುನಾವಣೆ ನಡೆಸಲು ಸಾಧ್ಯವಾಗಿರುವುದಿಲ್ಲ.

  ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರು ಡೆಲಿಗೇಟ್ಸ್ ನಮೂನೆ ಮತ್ತು ಅಂತಿಮ ಮತದಾರರ ಪಟ್ಟಿಯನ್ನು ತಡವಾಗಿ ಸಲ್ಲಿಸಿರುವುದಾಗಿ ತಿಳಿಸಿ, ಡೆಲಿಗೇಟ್ಸ್ ನಮೂನೆ ಮತ್ತು ಸಂಬಂಧಪಟ್ಟ ದಾಖಲೆಗಳನ್ನು ಜಿಲ್ಲಾ ಹಾಪ್‌ಕಾಮ್ಸ್ ಕಾರ್ಯದರ್ಶಿ, ದಾವಣಗೆರೆ ಇವರ ದೂರಿನ ಬಗ್ಗೆ ಹಾಗೂ ಬಾಕಿಯನ್ನು ಪಾವತಿಸುವ ಬಗ್ಗೆ ನೋಟಿಸ್ ನೀಡಿರುವುದರ ಬಗ್ಗೆ ಆಕ್ಷೇಪಿಸಿದ್ದು, ಇವುಗಳ ಪರಿಶೀಲನೆ ನಡೆಸಿರುವುದು ಅಗತ್ಯವಾಗಿರುವುದಾಗಿ ತಿಳಿಸಿ, 20 ಜಿಲ್ಲಾ ಮಟ್ಟದ ಸದಸ್ಯ ಸಂಘಗಳಾದ ಹಾಪ್‌ಕಾಮ್ಸ್‌ಗಳ ಸಂಬಂಧಪಟ್ಟ ಅಧಿಕಾರಿಗಳನ್ನು ಹಾಗೂ ಜಿಲ್ಲೆಗಳ ಉಪನಿಬಂಧಕರುಗಳ ಸಭೆಯನ್ನು ಕರೆದು, ಪರಿಶೀಲನೆ ನಡೆಸಿ, ಕೂಲಂಕುಷವಾಗಿ ಚರ್ಚಿಸಿ ತೀರ್ಮಾನ ಕೈಗೊಳ್ಳಬಹುದಾಗಿ ತಿಳಿಸಿ, ಹಾಪ್‌ಕಾಮ್ಸ್ ಬೆಂಗಳೂರು ಇದರ ಸದಸ್ಯತ್ವವನ್ನು ಮತದಾರರ ಪಟ್ಟಿಯಲ್ಲಿ ಸೇರ್ಪಡೆ ಮಾಡುವ ಅಂಶಗಳನ್ನೊಳಗೊಂಡಂತೆ ಮತದಾರರ ಪಟ್ಟಿಯನ್ನು ಪರಿಶೀಲನೆಗೊಳಪಡಿಸಿ, ಪ್ರಕಟಿಸಲು 03 ತಿಂಗಳ ಕಾಲಾವಕಾಶ ಕೋರಲಾಗಿದೆ.

--4

ಮೇಲಿನ ಕಂಡಿಕೆಯಲ್ಲಿನ ಅಂಶಗಳಿಗೆ ಸಂಬಂಧಿಸಿದಂತೆ ಉಲ್ಲೇಖ(5)ರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರ ಪತ್ರದಲ್ಲಿ ವಿವರವಾದ ವರದಿಯನ್ನು ಸಲ್ಲಿಸಿದ್ದು, ಸದರಿ ಪತ್ರ ಹಾಗೂ ಸಂಬಂಧಿಸಿದ ದಾಖಲಾತಿಗಳನ್ನು ಪ್ರಾದೇಶಿಕ ಆಯುಕ್ತರಿಗೆ ಕಳುಹಿಸಿ, 01 ತಿಂಗಳ ಕಾಲಾವಧಿಯೊಳಗಾಗಿ ಚುನಾವಣೆ ನಡೆಸುವ ಬಗ್ಗೆ ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಿ, ಚುನಾವಣಾ ವೇಳಾಪಟ್ಟಿಯಂತೆ ಪರಿಷ್ಕೃತ ಅಧಿಸೂಚನೆ ಹೊರಡಿಸುವ ಬಗ್ಗೆ ಸೂಕ್ತ ಪ್ರಸ್ತಾವೆ ಸಲ್ಲಿಸಲು ತಿಳಿಸಲಾಗಿರುತ್ತದೆ. ಅದರಂತೆ ದಿನಾಂಕ:06.10.2015ರ ಪತ್ರದಲ್ಲಿ ಚುನಾವಣಾ ನಡೆಸುವ ಬಗ್ಗೆ ವೇಳಾಪಟ್ಟಿಯನ್ನು ಕಳುಹಿಸಿ, ಅನುಮೋದನೆ ನೀಡಲು ಕೋರಲಾಗಿದೆ.

**ಮೇಲಿನ ಕಂಡಿಕೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಉಲ್ಲೇಖ(4)ರಲ್ಲಿ ಹೊರಡಿಸಿದ ಅಧಿಸೂಚನೆಯಂತೆಯೂ ಸಹ ನಿಗದಿತ ದಿನಾಂಕಗಳಲ್ಲಿ ಚುನಾವಣೆ ನಡೆಸಲು ಸಾಧ್ಯವಾಗಿರುವುದಿಲ್ಲ.**

- **ಕರ್ನಾಟಕ ರಾಜ್ಯ ಸಹಕಾರ ಕೈಗಾರಿಕಾ ಮಹಾಮಂಡಳ ನಿ., ಬೆಂಗಳೂರು:-**ಈ ಮಹಾಮಂಡಳದ ಚುನಾವಣೆಗೆ ಸಂಬಂಧಿಸಿದಂತೆ ಅಪರ ನಿಬಂಧಕರು (ಕೈಗಾರಿಕೆ ಮತ್ತು ಹೈನುಗಾರಿಕೆ) ಇವರೊಂದಿಗೆ ನಡೆಸಿದ ಪತ್ರ ವ್ಯವಹಾರಗಳು ಈ ಕೆಳಗಿನಂತಿರುತ್ತವೆ.

ಕೈಗಾರಿಕಾ ಮಹಾಮಂಡಳದ ಚುನಾವಣೆ ಬಗ್ಗೆ ಸಕ್ಷಮ ಅಪರ ನಿಬಂಧಕರಿಗೆ ದಿನಾಂಕ:01.07.2015ರಂದು ಪತ್ರ ಬರೆದು ಈ ಹಿಂದೆ ಈ ಬಗ್ಗೆ ಪತ್ರ ವ್ಯವಹಾರ ಮಾಡಲಾದ ಅಂಶಗಳನ್ನು ವಿವರಿಸಿ, ಮಹಾಮಂಡಳದ ಅಧ್ಯಕ್ಷರು 02 ತಿಂಗಳು ಕಾಲಾವಕಾಶ ಕೋರಿರುವ ಬಗ್ಗೆ ತಿಳಿಸಿ, ಚುನಾವಣೆ ನಡೆಸಲು ಸೂಕ್ತ ವ್ಯವಸ್ಥೆ ಸಾಧ್ಯವಾಗದೇ ಇದ್ದರೆ ಸೂಕ್ತ ಕಾನೂನು ಕ್ರಮ ಕೈಗೊಂಡು ವರದಿ ಸಲ್ಲಿಸಲು ತಿಳಿಸಲಾಗಿತ್ತು. ಆದರೆ ಇದುವರೆವಿಗೂ ಈ ಬಗ್ಗೆ ವರದಿ ಮತ್ತು ಮಹಾಮಂಡಳದಿಂದ ಚುನಾವಣೆ ನಡೆಸುವ ಬಗ್ಗೆ ಮತದಾರರ ಪಟ್ಟಿ ಸಲ್ಲಿಕೆಯಾಗಿರುವುದಿಲ್ಲ. ಈ ಕಾರಣದಿಂದ ನಿಯಮಾನುಸಾರ ಚುನಾವಣೆ ನಡೆಸಲು ಸಾಧ್ಯವಾಗಿರುವುದಿಲ್ಲ. ಈ ಬಗ್ಗೆ ಅಪರ ನಿಬಂಧಕರಿಗೆ ಚುನಾವಣೆ ನಡೆಸಲು ಸೂಕ್ತ ವ್ಯವಸ್ಥೆ ಮಾಡಲು ಅದು ಸಾಧ್ಯವಾಗಿದ್ದರೆ, ಸೂಕ್ತ ಕಾನೂನು ಕ್ರಮ ಕೈಗೊಂಡು ವರದಿ ಸಲ್ಲಿಸಲು ಕೋರಲಾಗಿದೆ. ಆದರೆ ಈ ಬಗ್ಗೆ ಇದುವರೆವಿಗೂ ಯಾವುದೇ ವರದಿ ಬಂದಿರುವುದಿಲ್ಲ. ಈ ಕಾರಣದಿಂದಾಗಿ ಪ್ರಾಧಿಕಾರದಿಂದ ದಿನಾಂಕ 08.04.2015ರಂದು ಹೊರಡಿಸಿದ ಅಧಿಸೂಚನೆಯಂತೆ ನಿಯಮಾನುಸಾರ ಚುನಾವಣೆ ನಡಸಲು ಸಾಧ್ಯವಾಗಿರುವುದಿಲ್ಲ.

ಉಲ್ಲೇಖ(6)ರ ಪ್ರಾದೇಶಿಕ ಆಯುಕ್ತರ ಪತ್ರದಲ್ಲಿ ಮಹಾಮಂಡಳದ ಪರಿಶೀಲನಾಧಿಕಾರಿಗಳು ಸಲ್ಲಿಸಿರುವ ವರದಿಯಂತೆ ಮಹಾಮಂಡಳದ ಕೆಲವು ಸದಸ್ಯ ಸಂಘಗಳ ಕಾರ್ಯನಿರ್ವಹಣೆ ಮತ್ತು ಸ್ಥಿತಿಗತಿಯ ಬಗ್ಗೆ ಪೂರ್ಣವಾದ ಮಾಹಿತಿ ಇರುವುದಿಲ್ಲವಾಗಿ ತಿಳಿಸಿರುತ್ತಾರೆ. ಇದರಿಂದ ಸದಸ್ಯ ಸಂಘಗಳ ಸ್ಥಿತಿಗತಿಯ ಬಗ್ಗೆ ಸಂಬಂಧಪಟ್ಟವರಿಂದ ಇತ್ತೀಚ್ಚಿನ ಅಗತ್ಯ ಮಾಹಿತಿ/ ದಾಖಲೆಗಳನ್ನು ಪಡೆದು ಕೂಲಂಕುಷವಾಗಿ ಪರಿಶೀಲಿಸುವುದು ಅಗತ್ಯವಾಗಿರುತ್ತದೆ, ಅಲ್ಲದೇ ಮಹಾಮಂಡಳದಿಂದ ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸುವ ದಿನಾಂಕಕ್ಕೆ ಸುಸ್ತಿಯಾಗುವವರ ವಿವರವನ್ನು ಸಹ ಒದಗಿಸಿರುವುದಿಲ್ಲ ಹಾಗೂ ಸದಸ್ಯ ಸಂಘಗಳಿಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಹಾಗೂ ಸದರಿ ಜಿಲ್ಲೆಗಳ ಸಹಕಾರ ಸಂಘಗಳ ಉಪನಿಬಂಧಕರುಗಳ ಸಭೆಯನ್ನು ಕರೆದು, ಮೇಲ್ಕಂಡ ಅಂಶಗಳ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ಅಗತ್ಯ ಪರಿಶೀಲನೆ ನಡೆಸಿ ಸೂಕ್ತ ತೀರ್ಮಾನ ಕೈಗೊಳ್ಳಬೇಕಾಗಿರುತ್ತದೆ ಎಂದು ತಿಳಿಸಿ ಮಹಾಮಂಡಳದ ಚುನಾವಣೆಯನ್ನು ಪಾರದರ್ಶಕವಾಗಿ ನಡೆಸಲು ಮೂರು ತಿಂಗಳ ಸಮಯಾವಕಾಶ ನೀಡಿ ಚುನಾವಣೆ ದಿನಾಂಕ ನಿಗಧಿಪಡಿಸಲು ಕೋರಿರುತ್ತಾರೆ.

**ಮೇಲಿನ ಕಂಡಿಕೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಉಲ್ಲೇಖ(4)ರಲ್ಲಿ ಹೊರಡಿಸಿದ ಅಧಿಸೂಚನೆಯಂತೆಯೂ ಸಹ ನಿಗದಿತ ದಿನಾಂಕಗಳಲ್ಲಿ ಚುನಾವಣೆ ನಡೆಸಲು ಸಾಧ್ಯವಾಗಿರುವುದಿಲ್ಲ.**

- **ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿ., ಬೆಂಗಳೂರು:-**ಈ ಮಹಾಮಂಡಳದ ಚುನಾವಣೆಗೆ ಸಂಬಂಧಿಸಿದಂತೆ ಸಹಕಾರ ಸಂಘಗಳ ನಿಬಂಧಕರು ಮತ್ತು ಅಪರ ನಿಬಂಧಕರು (ಬಳಕೆ ಮತ್ತು ಮಾರಾಟ) ಮಹಾಮಂಡಳದ ಚುನಾವಣೆಗೆ ಸಂಬಂಧಿಸಿದಂತೆ ನಡೆಸಿದ ಪತ್ರ ವ್ಯವಹಾರಗಳು ಈ ಕೆಳಗಿನಂತಿರುತ್ತವೆ.

ಪ್ರಾಧಿಕಾರದಿಂದ ದಿನಾಂಕ:16.06.2015ರಂದು ಬರೆದ ಪತ್ರದಲ್ಲಿ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಗೌರವ ಉಚ್ಚನ್ಯಾಯಾಲಯದಲ್ಲಿ ಬಾಕಿ ಇರುವ ರಿಟ್ ಅರ್ಜಿಯನ್ನು ತ್ವರಿತವಾಗಿ ಇತ್ಯರ್ಥಪಡಿಸುವ ಬಗ್ಗೆ ಅಗತ್ಯ ಕ್ರಮ ಕೈಗೊಂಡು ಸರಿಯಾದ ಮತದಾರರ ಪಟ್ಟಿಯನ್ನು ಪ್ರಾದೇಶಿಕ ಆಯುಕ್ತರಿಗೆ ಮತ್ತು ಚುನಾವಣಾ ಪ್ರಾಧಿಕಾರಕ್ಕೆ ಕಳುಹಿಸಿ ಕೊಡಲು ತಿಳಿಸಲಾಗಿತ್ತು. ತದನಂತರ ದಿನಾಂಕ:23.06.2015ರಂದು ಗೌರವ ಉಚ್ಚನ್ಯಾಯಾಲಯದ ಆದೇಶದಂತೆ ನಿಬಂಧಕರಿಂದ

ಮೇಲ್ಮನವಿಯು ಇತ್ಯರ್ಥವಾದ ನಂತರ ಮತ್ತು ನಿಯಮಾನುಸಾರ ಮತದಾರರ ಪಟ್ಟಿಯನ್ನು ಪ್ರಾದೇಶಿಕ ಆಯುಕ್ತರು ಮತ್ತು ಚುನಾವಣಾ ಪ್ರಾಧಿಕಾರಕ್ಕೆ ಸಲ್ಲಿಸಲು ತಿಳಿಸಲಾಗಿದೆ. ಈ ಕಾರಣದಿಂದಾಗಿ ಪ್ರಾಧಿಕಾರದಿಂದ ದಿನಾಂಕ 08.04.2015ರಂದು ಹೊರಡಿಸಿದ ಅಧಿಸೂಚನೆಯಂತೆ ನಿಯಮಾನುಸಾರ ಚುನಾವಣೆ ನಡಸಲು ಸಾಧ್ಯವಾಗಿರುವುದಿಲ್ಲ.

ನಂತರ ವ್ಯವಸ್ಥಾಪಕ ನಿರ್ದೇಶಕರು ಪ್ರಾದೇಶಿಕ ಆಯುಕ್ತರಿಗೆ ಬರೆದಿರುವ ಪತ್ರದಲ್ಲಿ ದಿನಾಂಕ: 10.07.2015ಕ್ಕೆ ನಿಬಂಧಕರ ಬಳಿ ಇತ್ಯರ್ಥಕ್ಕೆ ಬಾಕಿ ಇದ್ದ ಪ್ರಕರಣವು ದಿನಾಂಕ:17.07.2015ಕ್ಕೆ ನಂತರ 31.07.2015ಕ್ಕೆ ಮುಂದೂಡಲ್ಪಟ್ಟಿರುವುದರಿಂದ ಪ್ರಕಟಣದ ಇತ್ಯರ್ಥವಾಗಿ ಅಂತಿಮ ಆದೇಶವಾದ ಕೂಡಲೇ ಸರಿಯಾದ ಮತದಾರರ ಪಟ್ಟಿಯನ್ನು ಕಳುಹಿಸಿ ಕೊಡಲು ಕ್ರಮವಿಡಲಾಗುವುದು ಎಂದು ತಿಳಿಸಿರುತ್ತಾರೆ.

ಪ್ರಾದೇಶಿಕ ಆಯುಕ್ತರು, ಬೆಂಗಳೂರು ಉಲ್ಲೇಖ(5)ರಲ್ಲಿನ ದಿನಾಂಕ:05.8.2015ರ ತಮ್ಮ ಪತ್ರದಲ್ಲಿ ಚುನಾವಣಾ ಪ್ರಾಧಿಕಾರದಿಂದ ಅಧಿಸೂಚನೆ ಹೊರಡಿಸಿದ ದಿನಾಂಕಗಳಲ್ಲಿ ಚುನಾವಣೆ ನಡೆಸಬೇಕಾದಲ್ಲಿ ನಿಯಮಾನುಸಾರ ಚುನಾವಣಾ ದಿನಾಂಕಕ್ಕೆ ಕನಿಷ್ಠ 45 ದಿನಗಳ ಪೂರ್ವದಲ್ಲಿ ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಬೇಕಾಗಿದ್ದು, ಸದರಿ ಮಹಾಮಂಡಳದ ಬೈಲಾ ತಿದ್ದುಪಡಿ ಬಗ್ಗೆ ನಿಬಂಧಕರ ನ್ಯಾಯಾಲಯದಲ್ಲಿ ಪ್ರಕರಣ ಈ ವರೆಗೆ ಇತ್ಯರ್ಥವಾಗದ ಕಾರಣ ನಿಗದಿತ ಕಾಲಾವಧಿಯಲ್ಲಿ ಚುನಾವಣಾ ಪ್ರಕ್ರಿಯೆಯನ್ನು ಕೈಗೊಳ್ಳಲು ಅವಕಾಶವಾಗುವುದಿಲ್ಲವೆಂಬ ಅಂಶವನ್ನು ಮತ್ತು ದಿನಾಂಕ:31.07.2015ರಂದು ವಿಚಾರಣೆಗೆ ಇದ್ದ ಪ್ರಕರಣವು ದಿನಾಂಕ:25.09.2015ಕ್ಕೆ ಮುಂದೂಡಲ್ಪಟ್ಟಿರುವುದಾಗಿ ವರದಿಸಿರುತ್ತಾರೆ. ತದನಂತರ ಮಹಾಮಂಡಳದ ಪ್ರಧಾನ ವ್ಯವಸ್ಥಾಪಕರು ಪ್ರಾದೇಶಿಕ ಆಯುಕ್ತರಿಗೆ ದಿನಾಂಕ:15.09.2015ರಂದು ಬರೆದ ಪತ್ರದಲ್ಲಿ ಪ್ರಕರಣ ಇತ್ಯರ್ಥವಾಗಿ ಅಂತಿಮ ಆದೇಶವಾದ ಕೂಡಲೇ ಸರಿಯಾದ ಮತದಾರರ ಪಟ್ಟಿಯನ್ನು ಕಳುಹಿಸಿ ಕೊಡಲು ಕ್ರಮವಹಿಸಲಾಗುವುದು ಎಂದು ತಿಳಿಸಿರುತ್ತಾರೆ. ಇದೇ ಅಂಶವನ್ನು ಪ್ರಾಧಿಕಾರದಿಂದ ನಿಬಂಧಕರಿಗೆ 12.08.2015ರಂದು ಬರೆದ ಪತ್ರದಲ್ಲಿ ಬಾಕಿ ಇರುವ ಪ್ರಕರಣವು ಇದುವರೆವಿಗೂ ಇತ್ಯರ್ಥವಾಗದೇ ಇರುವ ಕಾರಣ ಪರಿಷ್ಕೃತ ಅಧಿಸೂಚನೆಯ ದಿನಾಂಕದಲ್ಲಿಯೂ ಸಹ ಚುನಾವಣಾ ಪ್ರಕ್ರಿಯೆಯನ್ನು ಕೈಗೊಳ್ಳಲು ಅವಕಾಶವಾಗದೇ ಇರುವ ಕಾರಣ ಸೂಕ್ತ ಅಗತ್ಯ ಕ್ರಮ ಕೈಗೊಂಡು ಸದರಿ ಮಹಾಮಂಡಳದ ಚುನಾವಣೆಯನ್ನು ನಡೆಸುವ ಬಗ್ಗೆ ಅವಕಾಶ ಮಾಡಿಕೊಡುವಂತೆ ಕೋರಲಾಗಿದೆ.

**ಮೇಲಿನ ಕಂಡಿಕೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಉಲ್ಲೇಖ(4)ರಲ್ಲಿ ಹೊರಡಿಸಿದ ಅಧಿಸೂಚನೆಯಂತೆಯೂ ಸಹ ನಿಗದಿತ ದಿನಾಂಕಗಳಲ್ಲಿ ಚುನಾವಣೆ ನಡೆಸಲು ಸಾಧ್ಯವಾಗಿರುವುದಿಲ್ಲ.**

- **ಕರ್ನಾಟಕ ರಾಜ್ಯ ರೇಷ್ಮೆ ಸಹಕಾರ ಮಾರಾಟ ಮಹಾಮಂಡಳ ನಿ., ಬೆಂಗಳೂರು:-** ಈ ಮಹಾಮಂಡಳದ ಚುನಾವಣೆಗೆ ಸಂಬಂಧಿಸಿದಂತೆ ನಡೆಸಿದ ಪತ್ರ ವ್ಯವಹಾರಗಳು ಈ ಕೆಳಗಿನಂತಿರುತ್ತವೆ.

  ಪ್ರಾಧಿಕಾರದಿಂದ ಕ್ರಮವಾಗಿ ದಿನಾಂಕ:03.01.2015: 04.04.2015 06.04.2015ರಂದು ಸಕ್ಷಮ ಅಪರ ನಿಬಂಧಕರಿಗೆ ಪತ್ರ ಬರೆದು, ಸದರಿ ಮಹಾಮಂಡಳದ ಚುನಾವಣೆ ನಡೆಸಲು ಸಾಧ್ಯವಿಲ್ಲದಿರುವುದನ್ನು ತಿಳಿಸಿ, ಈ ಬಗ್ಗೆ ಸಕ್ಷಮ ನಿಬಂಧಕರು ಸೂಕ್ತ ಕ್ರಮ ಕೈಗೊಂಡು ಪ್ರಾಧಿಕಾರಕ್ಕೆ ವರದಿಸುವಂತೆ ತಿಳಿಸಲಾಗಿದೆ. ಆದರೆ ಅಪರ ನಿಬಂಧಕರು ದಿನಾಂಕ:30.04.2015ರಂದು ಸಕ್ಷಮ ನಿಬಂಧಕರಾದ ಜವಳಿ ಅಭಿವೃದ್ಧಿ ಆಯುಕ್ತರು ಮತ್ತು ನಿರ್ದೇಶಕರು ಕೈಮಗ್ಗ ಮತ್ತು ಜವಳಿ ಇಲಾಖೆ ಇವರಿಗೆ ಪತ್ರ ಬರೆದು ರೇಷ್ಮೆ ಸಹಕಾರ ಮಾರಾಟ ಮಹಾಮಂಡಳ ಆಡಳಿತಾತ್ಮಕವಾಗಿ ಸರ್ಕಾರದ ಅಧಿಸೂಚನೆ ದಿನಾಂಕ:17.02.2011ರನ್ವಯ ಜವಳಿ ಅಭಿವೃದ್ಧಿ ಆಯುಕ್ತರ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ಪ್ರಸ್ತುತ ಕಾರ್ಯನಿರ್ವಹಣೆ ಬಗ್ಗೆ ಹಾಗೂ ಸಮಾಪನೆಗೊಳಿಸುವ ಬಗ್ಗೆ ತಮ್ಮ ಅಭಿಪ್ರಾಯ ಸಹಿತ ವರದಿ ನೀಡಲು ಕೋರಿ ಅದರ ಪ್ರತಿಯನ್ನು ಪ್ರಾಧಿಕಾರಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

  ನಂತರ ಪ್ರಾದೇಶಿಕ ಆಯುಕ್ತರು ದಿನಾಂಕ:30.07.2015ರಲ್ಲಿ ಜವಳಿ ಆಯುಕ್ತರು ಹಾಗೂ ನಿರ್ದೇಶಕರು ಕೈಮಗ್ಗ ಮತ್ತು ಜವಳಿ ಇವರಿಗೆ ಬರೆದ ಪತ್ರದಲ್ಲಿ ಕರ್ನಾಟಕ ರಾಜ್ಯ ರೇಷ್ಮೆ ಸಹಕಾರ ಮಾರಾಟ ಮಹಾಮಂಡಳದ ಕಾರ್ಯನಿರ್ವಹಣೆ ಮತ್ತು ಸಮಾಪನೆಗೊಳಿಸುವ ಕುರಿತು ಕೈಗೊಂಡಿರುವ ಮಾಹಿತಿಯನ್ನು ಜರೂರಾಗಿ ನೀಡಬೇಕೆಂದು ಕೋರಿರುತ್ತಾರೆ.

  ಅದೇ ರೀತಿಯಲ್ಲಿ ಪ್ರಾದೇಶಿಕ ಆಯುಕ್ತರು ಚುನಾವಣಾ ಪ್ರಾಧಿಕಾರಕ್ಕೆ ಬರೆದಿರುವ ಪತ್ರದಲ್ಲಿ ಚುನಾವಣೆಯನ್ನು ನಡೆಸಬೇಕಾದಲ್ಲಿ ನಿಯಮಾನುಸಾರ ಚುನಾವಣಾ ದಿನಾಂಕಕ್ಕೆ 45 ದಿನಗಳ ಪೂರ್ವದಲ್ಲಿ ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಬೇಕಾಗಿದ್ದು, ಸದರಿ ಮಹಾಮಂಡಳದ ಬಗ್ಗೆ ಯಾವುದೇ ಮಾಹಿತಿ ಸ್ವೀಕೃತವಾಗದ ಕಾರಣ, ನಿಗದಿತ ಕಾಲಾವಧಿಯಲ್ಲಿ ಚುನಾವಣಾ ಪ್ರಕ್ರಿಯೆಗಳನ್ನು ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ.

--6

ಈ ಎಲ್ಲಾ ಅಂಶಗಳ ಬಗ್ಗೆ ದಿನಾಂಕ:13.08.2015ರಲ್ಲಿ ಚುನಾವಣಾ ಪ್ರಾಧಿಕಾರದಿಂದ ಜವಳಿ ಆಯುಕ್ತರಿಗೆ ಬರೆದ ಪತ್ರದಲ್ಲಿ ಈ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಚುನಾವಣಾ ಪ್ರಾಧಿಕಾರಕ್ಕೆ ಮತ್ತು ಪ್ರಾದೇಶಿಕ ಆಯುಕ್ತರಿಗೆ ವರದಿ ಸಲ್ಲಿಸಲು ಕೋರಲಾಗಿದೆ.

ದಿನಾಂಕ:25.08.2015ರಲ್ಲಿ ಜವಳಿ ಅಭಿವೃದ್ಧಿ ಆಯುಕ್ತರು ಚುನಾವಣಾ ಪ್ರಾಧಿಕಾರಕ್ಕೆ ಬರೆದಿರುವ ಪತ್ರದಲ್ಲಿ ದಿನಾಂಕ:05.08.2015ರಂದು ಸಹಕಾರ ಸಂಘಗಳ ಜಂಟಿ ನಿಬಂಧಕರು, ರೇಷ್ಮೆ ಇಲಾಖೆ, ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಆಡಳಿತಾಧಿಕಾರಿಗಳು ಅವರ ಸಮ್ಮುಖದಲ್ಲಿ ಸಭೆ ಕರೆದು, ಮಹಾಮಂಡಳದ ಸದ್ಯದ ಪರಿಸ್ಥಿತಿ ಬಗ್ಗೆ ಚರ್ಚಿಸಲಾಗಿ, ಸಂಸ್ಥೆಯನ್ನು ಉಳಿಸಿಕೊಳ್ಳುವ ಅಥವಾ ಸಮಾಪನೆಗೊಳಿಸುವ ಬಗ್ಗೆ ಮಹಾಮಂಡಳದ ಸರ್ವಸದಸ್ಯರ ಸಭೆ ನಡೆಸಿ, ಎಲ್ಲಾ ಸದಸ್ಯರ ಅಭಿಪ್ರಾಯ ಪಡೆದು ಕ್ರಿಯಾಯೋಜನೆಯನ್ನು ಪಡೆಯಲು ತೀರ್ಮಾನಿಸಲಾಗಿರುತ್ತದೆ ಎಂಬುದಾಗಿ ತಿಳಿಸಿ, ಸದರಿ ಪ್ರಸ್ತಾವನೆಯನ್ನು ಸ್ವೀಕೃತಗೊಂಡ ತರುವಾಯ ರೇಷ್ಮೆ ಇಲಾಖೆ ಮತ್ತು ಸಹಕಾರ ಇಲಾಖೆಯೊಂದಿಗೆ ಸಮಾಲೋಚಿಸಿ, ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ವರದಿಸಿರುತ್ತಾರೆ.

ಈ ಅಂಶವನ್ನು ಚುನಾವಣಾ ಪ್ರಾಧಿಕಾರದಿಂದ ಪ್ರಾದೇಶಿಕ ಆಯುಕ್ತರಿಗೆ ತಿಳಿಸಿ, ಅದರ ಪ್ರತಿಯನ್ನು ನಿಬಂಧಕರಿಗೆ ಸೂಕ್ತ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿರುತ್ತದೆ.

**ಮೇಲಿನ ಕಂಡಿಕೆಗಳಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಉಲ್ಲೇಖ(4)ರಲ್ಲಿ ಹೊರಡಿಸಿದ ಅಧಿಸೂಚನೆಯಂತೆಯೂ ಸಹ ನಿಗದಿತ ದಿನಾಂಕಗಳಲ್ಲಿ ಚುನಾವಣೆ ನಡೆಸಲು ಸಾಧ್ಯವಾಗಿರುವುದಿಲ್ಲ ಮತ್ತು ಈ ಮಹಾಮಂಡಳಕ್ಕೆ ರಿಟರ್ನಿಂಗ್ ಆಫೀಸರ್ ನೇಮಕಾತಿಯನ್ನು ಮಾಡಲಾಗಿರುವುದಿಲ್ಲ.**

ಮೇಲಿನ ಕಂಡಿಕೆಗಳಲ್ಲಿ ವಿವರಿಸಿರುವ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಉಲ್ಲೇಖ(1)ರ ಅಧಿಸೂಚನೆಯಂತೆ 04ನೇ ಹಂತದಲ್ಲಿ ಅಪೆಕ್ಸ್ ಸಹಕಾರ ಸಂಘಗಳಿಗೆ ಚುನಾವಣೆಯನ್ನು ನಡೆಸುವ ಸಂಬಂಧ ಸಹಕಾರ ಸಂಘಗಳ ಅಧಿನಿಯಮ 1960ರ ನಿಯಮ 2(i-1)ರ ಅವಕಾಶದಂತೆ **ಪ್ರಾಧಿಕಾರದ ಆದೇಶ ಸಂಖ್ಯೆ:ಸಚುಪ್ರಾ/ ಜಿಚುಅ/ಅಪೆಕ್ಸ್/104/2014-15 ದಿನಾಂಕ: 05.03.2015ರಲ್ಲಿ ಈಗಾಗಲೇ ಪ್ರಾದೇಶಿಕ ಆಯುಕ್ತರುಗಳನ್ನು ಜಿಲ್ಲಾ ಚುನಾವಣಾಧಿಕಾರಿಗಳನ್ನಾಗಿ ನೇಮಕಾತಿ ಮಾಡಿ ಈಗಾಗಲೇ ಆದೇಶಿಸಲಾಗಿರುವುದನ್ನು ಮುಂದುವರೆಸಲಾಗಿದೆ. ಅದೇ ರೀತಿಯಲ್ಲಿ ಅವರಿಗೆ ಸಹಾಯಕರಾಗಿ ಕೆಲಸ ನಿರ್ವಹಿಸಲು ಸಹಾಯಕ ಜಿಲ್ಲಾ ಚುನಾವಣಾಧಿಕಾರಿಗಳನ್ನು ನೇಮಕಾತಿ ಮಾಡಿ ಈಗಾಗಲೇ ಆದೇಶಿಸಲಾಗಿರುವುದನ್ನು ಮುಂದುವರೆಸಲಾಗಿದೆ.**

ಮೇಲೆ ವಿವರಿಸಿರುವ ಹಿನ್ನೆಲೆಯಲ್ಲಿ ಅಪೆಕ್ಸ್ ಸಹಕಾರ ಸಂಘಗಳ ಚುನಾವಣೆ ದಿನಾಂಕಗಳನ್ನು ಗೊತ್ತುಪಡಿಸಿ, ಅಧಿಸೂಚನೆ ಹೊರಡಿಸಿ ಸದರಿ ಆಡಳಿತ ಮಂಡಳಿ ಅವಧಿಯಲ್ಲಿ ಚುನಾವಣೆಗಳನ್ನು ನಡೆಸಲು ಆದೇಶಿಸಿದೆ. ಈ ಅಧಿಸೂಚನೆಯಲ್ಲಿ ಲಗತ್ತಿಸಿರುವ ಅನುಬಂಧ -1 ಮತ್ತು ಅನುಬಂಧ -2ರ (ಚೆಕ್ಲಿಸ್ಟ್)ನ್ನು ಅಧಿಸೂಚನೆಗೆ ಲಗತ್ತಿಸಿದ್ದು ಜಿಲ್ಲಾ ಚುನಾವಣಾಧಿಕಾರಿಗಳು ಅದರಂತೆ ಚುನಾವಣೆ ನಡೆಸಲು ಕ್ರಮವಿಡತಕ್ಕದ್ದು.

| ಕ್ರಮ ಸಂಖ್ಯೆ | ಸಹಕಾರ ಸಂಘಗಳ ವರ್ಗ | ಚುನಾವಣೆ ನಡೆಸಲು ಗೊತ್ತುಪಡಿಸಿದ ದಿನಾಂಕ / ಅವಧಿ |
|---|---|---|
| | ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ-39ಎ(2)(ಡಿ), ರೀತ್ಯಾ ನಾಲ್ಕನೇ ಹಂತದ ಅಪೆಕ್ಸ್ ಸಂಘಗಳ ಚುನಾವಣೆ ನಡೆಸಲು ಗೊತ್ತುಪಡಿಸಲಾದ ದಿನಾಂಕಗಳು. | |
| 3(ಬಿ) | 1) ಕರ್ನಾಟಕ ರಾಜ್ಯ ಸಹಕಾರ ತೆಂಗಿನ ನಾರಿನ ಮಹಾಮಂಡಳ ನಿಯಮಿತ, ರಾಜಾಜಿನಗರ, ಬೆಂಗಳೂರು.<br>2) ಕರ್ನಾಟಕ ರಾಜ್ಯ ಸಹಕಾರ ಕೈಗಾರಿಕಾ ಮಹಾಮಂಡಳ ನಿ., ಬೆಂಗಳೂರು<br>3) ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿ., ಬೆಂಗಳೂರು<br>4) ಕರ್ನಾಟಕ ರಾಜ್ಯ ರೇಷ್ಮೆ ಸಹಕಾರ ಮಾರಾಟ ಮಹಾಮಂಡಳ ನಿ., ಬೆಂಗಳೂರು | ದಿನಾಂಕ :05.12..2015/ 06.12.2015<br>ಅಥವಾ<br><br>ದಿನಾಂಕ:19.12.2015 /20.12.2015ರ ಮೇಲೆ ನಮೂದಿಸಿದ ದಿನಾಂಕಗಳಲ್ಲಿ ಸೂಕ್ತವೆನಿಸಿದ ದಿನಾಂಕದಂದು ಚುನಾವಣೆ ನಡೆಸತಕ್ಕದ್ದಾಗಿದೆ. |

--7

| | | |
|---|---|---|
| 3(ಸಿ) | 1) ಕರ್ನಾಟಕ ರಾಜ್ಯ ತೋಟಗಾರಿಕಾ ಮಹಾಮಂಡಳ ನಿ. ಬೆಂಗಳೂರು<br>2) ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ., ಬೆಂಗಳೂರು | ದಿನಾಂಕ:26.10.2015 ಪ್ರಾದೇಶಿಕ ಆಯುಕ್ತರು ಗೊತ್ತುಪಡಿಸಿರುವ ದಿನಾಂಕವನ್ನು ಅನುಮೋದಿಸಿದೆ.<br><br>ದಿನಾಂಕ:07.11.2015ರಂದು ಚುನಾವಣೆ ನಡೆಸಲು ಗೊತ್ತುಪಡಿಸಿರುವ ದಿನಾಂಕ ಮತ್ತು ಸ್ಥಳವನ್ನು ಅನುಮೋದಿಸಿದೆ. |

(ಎನ್.ಸಿ.ಮುನಿಯಪ್ಪ)
ಆಯುಕ್ತರು
ಸಹಕಾರ ಚುನಾವಣಾ ಪ್ರಾಧಿಕಾರ,
ಬೆಂಗಳೂರು

**ಪ್ರತಿಯನ್ನು ಈ ಕೆಳಕಂಡವರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ :-**

1. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಯವರು, ಸಹಕಾರ ಇಲಾಖೆ, ಬಹುಅಂತಸ್ತುಗಳ ಕಟ್ಟಡ, 6ನೇ ಮಹಡಿ, ಬೆಂಗಳೂರು.
2. ಸಹಕಾರ ಸಂಘಗಳ ನಿಬಂಧಕರು, ನಂ.1, ಆಲಿಆಸ್ಕರ್ ರಸ್ತೆ, ಕರ್ನಾಟಕ ರಾಜ್ಯ, ಬೆಂಗಳೂರು.
3. ಪ್ರಾದೇಶಿಕ ಆಯುಕ್ತರು (Regional Commissioner) ಬೆಂಗಳೂರು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು (**ಅಪೆಕ್ಸ್ ಸಹಕಾರ ಸಂಘಗಳು**).
4. ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಎಲ್ಲಾ ಸಹಕಾರ ಸಂಘಗಳ ಅಪರ ನಿಬಂಧಕರಿಗೆ.
5. ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಎಲ್ಲಾ ಸಹಕಾರ ಸಂಘಗಳ ಜಂಟಿ ನಿಬಂಧಕರಿಗೆ.
6. ಸಹಕಾರ ಸಂಘಗಳ ಜಂಟಿನಿಬಂಧಕರು, ಬೆಂಗಳೂರು ಹಾಗೂ ಮೈಸೂರು ಪ್ರಾಂತ
7. ರಿಟರ್ನಿಂಗ್ ಆಫೀಸರ್ ...................................................................................................
8. ಮುಖ್ಯಕಾರ್ಯನಿರ್ವಹಣಾಧಿಕಾರಿ ...........................................................................................
9. ಸಂಬಂಧಪಟ್ಟ ಸಹಕಾರ ಸಂಘಗಳ ಉಪನಿಬಂಧಕರು ........................................ ಜಿಲ್ಲೆ
10. ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಪ್ರಾಧಿಕಾರದ ಜಂಟಿ ನಿಬಂಧಕರು / ಉಪನಿಬಂಧಕರು / ಸಹಾಯಕ ನಿಬಂಧಕರು, ಬೆಂಗಳೂರು ಪ್ರಾಂತ
11. ರಕ್ಷಾ ಕಡತ/ ಕಛೇರಿ ಪ್ರತಿ.

## ಅನುಬಂಧ-1

**ಜಿಲ್ಲಾ ಚುನಾವಣಾಧಿಕಾರಿಗಳು ಸಹಕಾರ ಸಂಘಗಳ ಆಡಳಿತ ಮಂಡಲಿಗೆ / ಪದಾಧಿಕಾರಿಗಳ ಸ್ಥಾನಗಳಿಗೆ ಚುನಾವಣೆಯನ್ನು ಕಾನೂನಿಗೆ ಅನುಗುಣವಾಗಿ ನಡೆಸುವ ಬಗ್ಗೆ ಅನುಸರಿಸಬೇಕಾದ ಮಾರ್ಗಸೂಚಿಗಳು.**

01. ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ-13ಡಿ(2)ರ ಅವಕಾಶದಂತೆ ಸಹಕಾರ ಚುನಾವಣಾ ಪ್ರಾಧಿಕಾರವು ಜಿಲ್ಲಾ ಚುನಾವಣಾಧಿಕಾರಿಗಳಿಂದ ಸಾಮಾನ್ಯ ಚುನಾವಣೆಗಳು ಸನ್ನಿಹಿತವಾಗಿರುವ ಸಹಕಾರ ಸಂಘಗಳ ಪಟ್ಟಿಯನ್ನೊಳಗೊಂಡ ಅಂದರೆ ಜಿಲ್ಲಾ ಚುನಾವಣಾಧಿಕಾರಿಗಳಿಂದ ಅಂತಹ ವರದಿಗಳು ಸ್ವೀಕೃತವಾದ ನಂತರ, ಜಿಲ್ಲೆಯೊಳಗಿನ ಪ್ರತಿ ಸಂಘದ ಹೆಸರು / ಅಂಚೆ ವಿಳಾಸ ಹಾಗೂ ಸಾಮಾನ್ಯ ಚುನಾವಣೆಯ ದಿನಾಂಕ ಮತ್ತು ಸ್ಥಳಗಳನ್ನು ತಿಳಿಸುವ, ಆಡಳಿತ ಮಂಡಲಿಗಳ ಸಾಮಾನ್ಯ ಚುನಾವಣೆಗಳನ್ನು ನಡೆಸುವ ಮತ್ತು ಮತದಾರರ ಪಟ್ಟಿಗಳನ್ನು ತಯಾರಿಸುವ ಸಂಬಂಧದಲ್ಲಿ ವೇಳಾಪಟ್ಟಿಗಳನ್ನು ಪ್ರಕಟಿಸತಕ್ಕದ್ದಾಗಿರುತ್ತದೆ.

02. ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ-21ರ ಉಪಕಲಂ (2)ರ ಖಂಡ (ಎ)ಅಡಿ ಪರಂತುಕದ ಪ್ರಕಾರ ಒಂದು ಸಹಕಾರ ಸಂಘಕ್ಕೆ ಹೊಸ [ಮಂಡಲಿ]ಯು ಆಯ್ಕೆಯಾದಲ್ಲಿ ಹಾಗೆ ಹೊಸದಾಗಿ ಆಯ್ಕೆಯಾದ [ಮಂಡಲಿ]ಯು, ಸಂಘದ ಸದಸ್ಯತ್ವ ಹೊಂದಿರುವ ಯಾವುದೇ ಇತರ ಸಹಕಾರ ಸಂಘಕ್ಕೆ ಡೆಲಿಗೇಟನನ್ನು ಅಥವಾ ನಾಮಿನಿಯನ್ನು ಕಳುಹಿಸತಕ್ಕದ್ದು ಎಂದಿರುತ್ತದೆ. ಇದರ ಪರಿಣಾಮವಾಗಿ ಪ್ರಾಥಮಿಕ ಸಹಕಾರ ಸಂಘದ ಚುನಾವಣೆ ಮುಗಿದು ಅದು ಡೆಲಿಗೇಟನನ್ನು ಕಳುಹಿಸಿದ ನಂತರವೇ ಆ ಸಂಘವು ಸದಸ್ಯತ್ವ ಪಡೆದಿರುವ ಮಾಧ್ಯಮಿಕ ಸಂಘ ಅಥವಾ ಫೆಡೆರಲ್ ಸಂಘದ ಮತದಾರರ ಕರಡುಪಟ್ಟಿ ನಂತರ ಅಂತಿಮ ಮತದಾರರ ಪಟ್ಟಿಯನ್ನು ಸಿದ್ಧಪಡಿಸಿ ಪ್ರಕಟಿಸಲು ಸಾಧ್ಯವಾಗುತ್ತದೆ. ಹಾಗೆಯೇ, ಒಂದು ಅಪೆಕ್ಸ್ ಸಹಕಾರ ಸಂಘದ ಮತದಾರರ ಪಟ್ಟಿಯನ್ನು ಅದಕ್ಕೆ ಸಂಯೋಜಿತವಾಗಿರುವ ಫೆಡರಲ್ ಸಹಕಾರ ಸಂಘಗಳ ಚುನಾವಣೆ ಮುಗಿದು ಅವುಗಳು ಡೆಲಿಗೇಟನನ್ನು ಕಳುಹಿಸುವವರೆಗೆ ಅಂತಿಮ ಮತದಾರರ ಪಟ್ಟಿ ತಯಾರಿಸಲು ಬರುವುದಿಲ್ಲ. ಪರಿಣಾಮವಾಗಿ ಪ್ರಾಥಮಿಕ ಸಹಕಾರ ಸಂಘಗಳ ಚುನಾವಣೆ ಮುಗಿದ ನಂತರವೇ ಮಾಧ್ಯಮಿಕ ಅಥವಾ ಫೆಡರಲ್ ಸಹಕಾರ ಸಂಘಗಳ ಚುನಾವಣೆ ನಡೆಸತಕ್ಕದ್ದಾಗಿರುತ್ತದೆ. ಹಾಗೆಯೇ ಫೆಡರಲ್ ಸಹಕಾರ ಸಂಘಗಳ ಚುನಾವಣೆ ಮುಗಿದ ನಂತರ ಅಪೆಕ್ಸ್ ಸಂಘಗಳ ಚುನಾವಣೆ ನಡೆಸತಕ್ಕದ್ದಾಗಿದೆ.

03. ಸಹಕಾರ ಸಂಘಗಳ ಅಧಿನಿಯಮ 1959 ಕಲಂ-28ಬಿ ರೀತ್ಯಾ ಹೊಸದಾಗಿ ಚುನಾಯಿತರಾದ ಮಂಡಲಿಯ ಸದಸ್ಯರು ನಿರ್ಗಮಿಸುತ್ತಿರುವ ಮಂಡಲಿಯ ಪದಾವಧಿಯು ಮುಕ್ತಾಯವಾದ ಕೂಡಲೇ ಪದಧಾರಣ ಮಾಡಲು ಅರ್ಹರಾಗಿರುತ್ತಾರೆ.

04. ಚುನಾವಣೆಗಳನ್ನು ನಡೆಸುವುದಕ್ಕಾಗಿ ಮತ್ತು ಮತದಾರರ ಪಟ್ಟಿಗಳನ್ನು ಸಿದ್ಧಪಡಿಸುವುದಕ್ಕಾಗಿ ತಗಲುವ ವೆಚ್ಚವನ್ನು ಸಂಬಂಧಿಸಿದ ಸಂಘಗಳೇ ಭರಿಸತಕ್ಕದ್ದು.

05. ಪದಾವಧಿಯು ಮುಗಿದ ಸಂಘಗಳು ಕೂಡಲೆ ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಹಾಗೂ ಜಿಲ್ಲಾಚುನಾವಣಾಧಿಕಾರಿಗಳಿಗೆ ವರದಿ ಸಲ್ಲಿಸತಕ್ಕದ್ದು. ಸಹಕಾರ ಚುನಾವಣಾ ಪ್ರಾಧಿಕಾರವು / ಜಿಲ್ಲಾ ಚುನಾವಣಾಧಿಕಾರಿಗಳು ಸುಗಮವಾಗಿ ಮತದಾರರ ಪಟ್ಟಿಗಳನ್ನು ತಯಾರಿಸುವುದಕ್ಕೆ ಮತ್ತು ಚುನಾವಣೆಗಳನ್ನು ನಡೆಸುವುದಕ್ಕೆ ಸಂಬಂಧಿಸಿದ ಸಂಘಗಳ ಆಡಳಿತ ಮಂಡಲಿ ಹಾಗೂ ಮುಖ್ಯಕಾರ್ಯನಿರ್ವಾಹಕರು ಅವಶ್ಯವಾದ ಎಲ್ಲಾ ನೆರವು, ಸಹಾಯ ಮತ್ತು ಸಹಕಾರವನ್ನು ನೀಡತಕ್ಕದ್ದು.

06. ಜಿಲ್ಲಾ ಚುನಾವಣಾಧಿಕಾರಿಗಳು ರಿಟರ್ನಿಂಗ್ ಅಧಿಕಾರಿಗಳ ನೇಮಕಾತಿ ಆದೇಶ ಪ್ರಾಧಿಕಾರದಿಂದ ಸ್ವೀಕೃತವಾದ ಕೂಡಲೆ ಸಂಬಂಧಪಟ್ಟ ರಿಟರ್ನಿಂಗ್ ಆಫೀಸರ್‌ಗಳನ್ನು ಸಂಪರ್ಕಿಸಿ ಆದೇಶದ ಪ್ರತಿಗಳು ತಲುಪಿರುವ ಬಗ್ಗೆ ಅಗತ್ಯ ಕ್ರಮ ಕೈಗೊಂಡು ಆದೇಶದ ಪ್ರತಿಗಳು ತಲುಪಿರುವ ಬಗ್ಗೆ ಖಚಿತ ಪಡಿಸಿಕೊಳ್ಳತಕ್ಕದ್ದು.

07. ಜಿಲ್ಲಾ ಚುನಾವಣಾಧಿಕಾರಿಯು ನಿಯಮ 14ರ ರೀತ್ಯಾ ಚುನಾವಣೆ ಸಂಬಂಧ ನಮೂನೆ-XI ರಲ್ಲಿ ಅಧಿಸೂಚನೆಯನ್ನು ಹೊರಡಿಸತಕ್ಕದ್ದು.

08. ಆ ನಂತರ ರಿರ್ಟನಿಂಗ್ ಅಧಿಕಾರಿಯು ಉದ್ದೇಶಿತ ಚುನಾವಣೆ ಸಂಬಂಧ ನಮೂನೆ-XII ರಲ್ಲಿ 'ನಿಯಮ-14(3)'ರ ಚುನಾವಣಾ ನೋಟೀಸ್ ನೀಡುವ ಕುರಿತು ಜಿಲ್ಲಾ ಚುನಾವಣಾಧಿಕಾರಿ ನಿಗಾವಹಿಸತಕ್ಕದ್ದು ಮತ್ತು ಖಾತರಿ ಪಡಿಸಿಕೊಳ್ಳತಕ್ಕದ್ದು.

09. ಜಿಲ್ಲಾ ಚುನಾವಣಾಧಿಕಾರಿಗಳು ಸಂಬಂಧಿಸಿದ ಸಂಘಗಳ ಮತದಾರರ ಪಟ್ಟಿಗಳನ್ನು ಸಿದ್ಧಪಡಿಸುವಿಕೆ ಮತ್ತು ಪರಿಶೀಲನೆ, ಚುನಾವಣಾ ಸಿಬ್ಬಂದಿ, ಮತದಾನಕ್ಕೆ ಸೂಕ್ತ ಸ್ಥಳ ನಿಗದಿಪಡಿಸುವುದು, ಮತ ಕೇಂದ್ರಗಳ ಪರಿಶೀಲನೆ, ಮತ ಎಣಿಕೆ ವ್ಯವಸ್ಥೆ, ಚುನಾವಣಾ ಸಾಮಗ್ರಿಗಳ ವ್ಯವಸ್ಥೆ, ಚುನಾವಣಾ ಕೆಲಸ ಕಾರ್ಯಗಳ ಉಸ್ತುವಾರಿ ಕುರಿತಂತೆ ಚುನಾವಣೆಗೆ ಪೂರ್ವದಲ್ಲಿ ಜಿಲ್ಲಾ ಚುನಾವಣಾಧಿಕಾರಿಗಳಿಗೆ ಅಗತ್ಯ ಸಹಕಾರ ನೀಡತಕ್ಕದ್ದು.

10. ಸಹಕಾರ ಸಂಘಗಳ ಚುನಾವಣೆಗಳನ್ನು ನಡೆಸುವ ಸಂಬಂಧ ಸಹಕಾರ ಸಂಘಗಳ ಮುಖ್ಯಕಾರ್ಯನಿರ್ವಾಹಕರು ಅಧಿನಿಯಮ / ನಿಯಮಗಳ ಅವಕಾಶದಂತೆ ಕ್ರಮ ಕೈಗೊಳ್ಳುವುದು ಮತ್ತು ಸಂಘಗಳ ಆಡಳಿತ ಮಂಡಲಿಗಳ ಮುಖ್ಯ ಕಾರ್ಯನಿರ್ವಾಹಕರು, ಜಿಲ್ಲಾ ಚುನಾವಣಾಧಿಕಾರಿಗಳ ನಿರ್ದೇಶನಗಳನ್ವಯ ಹಾಗೂ ನಿಯಮಾನುಸಾರ ಅಗತ್ಯ ಕ್ರಮವಿಡಲು ಆದೇಶಿಸಿದೆ.

ಮೇಲ್ಕಂಡ ಎಲ್ಲಾ ಅಂಶಗಳ ಬಗ್ಗೆ ಸಹಕಾರ ಸಂಘಗಳ ಅಧಿನಿಯಮ / ನಿಯಮಗಳ ಅವಕಾಶವನ್ನು ಪ್ರಾಧಿಕಾರವು ಗಣನೆಗೆ ತೆಗೆದುಕೊಂಡು ಅಪೆಕ್ಸ್ ಸಹಕಾರ ಸಂಘಗಳ ಸಾಮಾನ್ಯ ಚುನಾವಣೆಗಳನ್ನು ನಡೆಸಲು ದಿನಾಂಕಗಳನ್ನು ಪರಿಷ್ಕರಿಸಿ ಪರಿಷ್ಕೃತ ಅಧಿಸೂಚನೆಯನ್ನು ಹೊರಡಿಸಿದೆ. ಸಂಬಂಧಿಸಿದ ಸಹಕಾರ ಸಂಘಗಳ ಚುನಾವಣೆ ನಡೆಸುವ ಸಂಬಂಧ ಸಹಕಾರ ಸಂಘಗಳ ಅಧಿನಿಯಮ / ನಿಯಮಗಳು / ಬೈಲಾಗಳಿಗೆ ಅನುಗುಣವಾಗಿ ಸರಿಯಾದ ಮತದಾರರ ಪಟ್ಟಿಯನ್ನು ತಯಾರಿಸಲು ಮತ್ತು ಚುನಾವಣೆಯನ್ನು ನಿಯಮಾನುಸಾರ, ಪಾರದರ್ಶಕವಾಗಿ ನಡೆಸು ಬಗ್ಗೆ ಸಹಕಾರ ಸಂಘಗಳ ಆಡಳಿತ ಮಂಡಲಿಗಳು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಚುನಾವಣಾಧಿಕಾರಿಗಳು / ರಿರ್ಟನಿಂಗ್ ಆಫೀಸರ್‌ಗಳಿಗೆ ನಿಯಮಾನುಸಾರ ಅಗತ್ಯ ದಾಖಲೆಗಳನ್ನು ಒದಗಿಸಲು ಜವಾಬ್ದಾರರಾಗಿರುತ್ತಾರೆ.

(ಎನ್.ಸಿ.ಮುನಿಯಪ್ಪ)
ಆಯುಕ್ತರು
ಸಹಕಾರ ಚುನಾವಣಾ ಪ್ರಾಧಿಕಾರ,
ಬೆಂಗಳೂರು

## ಅನುಬಂಧ-2 (ಚೆಕ್‌ಲಿಸ್ಟ್)

**2015ನೇ ಸಾಲಿನಲ್ಲಿ ಪದಾವಧಿಯು ಮುಗಿಯಲಿರುವ ಅಪೆಕ್ಸ್ ಸಹಕಾರ ಸಂಘಗಳ ಆಡಳಿತ ಮಂಡಲಿಗೆ ಸಾಮಾನ್ಯ ಚುನಾವಣೆ ನಡೆಸುವಿಕೆ – ಹಂತ ಹಂತವಾಗಿ ನಿಯಮಾನುಸಾರ ಜಿಲ್ಲಾ ಚುನಾವಣಾಧಿಕಾರಿಯು ಕ್ರಮವಿಡುವ ಬಗ್ಗೆ ಚೆಕ್‌ಲಿಸ್ಟ್.**

ಸಂಖ್ಯೆ: ಸಚುಪ್ರಾ/ಆಡಳಿತ/ಚುನಾವಣೆ/ತಿದ್ದುಪಡಿ/39/2015 **ದಿನಾಂಕ:09.10.2015**

| ಕ್ರಮ ಸಂಖ್ಯೆ | ವಿವರ | ಷರಾ |
|---|---|---|
| 01 | ಅಪೆಕ್ಸ್ ಸಹಕಾರ ಸಂಘಗಳ ಆಡಳಿತ ಮಂಡಲಿ ಚುನಾವಣೆಗಳನ್ನು ನಡೆಸುವ ಸಂಬಂಧ ಚುನಾವಣಾ ದಿನಾಂಕಗಳನ್ನು ನಿಗಧಿಪಡಿಸುವುದು. | |
| | ರಾಜ್ಯಾದ್ಯಂತ ಕಾರ್ಯವ್ಯಾಪ್ತಿ ಹೊಂದಿರುವ – ಅಪೆಕ್ಸ್ ಸಂಘಗಳ ಚುನಾವಣೆ ನಡೆಸಲು ಗೊತ್ತುಪಡಿಸಲಾದ ದಿನಾಂಕಗಳು. | ದಿನಾಂಕ :05.12..2015/ 06.12.2015<br>ಅಥವಾ<br><br>ದಿನಾಂಕ:19.12.2015 /20.12.2015ರ ಮೇಲೆ ನಮೂದಿಸಿದ ದಿನಾಂಕಗಳಲ್ಲಿ ಸೂಕ್ತವೆನಿಸಿದ ದಿನಾಂಕದಂದು ಚುನಾವಣೆ ನಡೆಸತಕ್ಕದ್ದಾಗಿದೆ. |
| | 1. ಕರ್ನಾಟಕ ರಾಜ್ಯ ತೋಟಗಾರಿಕಾ ಮಹಾಮಂಡಳ ನಿ. ಬೆಂಗಳೂರು<br>2. ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ., ಬೆಂಗಳೂರು | ದಿನಾಂಕ:26.10.2015 ಪ್ರಾದೇಶಿಕ ಆಯುಕ್ತರು ಗೊತ್ತುಪಡಿಸಿರುವ ದಿನಾಂಕವನ್ನು ಅನುಮೋದಿಸಿದೆ.<br><br>ದಿನಾಂಕ:07.11.2015ರಂದು ಚುನಾವಣೆ ನಡೆಸಲು ಗೊತ್ತುಪಡಿಸಿರುವ ದಿನಾಂಕ ಮತ್ತು ಸ್ಥಳವನ್ನು ಅನುಮೋದಿಸಿದೆ. |
| 02 | ಮತ ನೀಡುವ ಹಕ್ಕುಳ್ಳ ಸದಸ್ಯರ ಕರಡು ಪಟ್ಟಿ, ಸುಸ್ತಿದಾರರ ಕರಡು ಪಟ್ಟಿ, ಮತದಾನದ ಹಕ್ಕನ್ನು ಹೊಂದಿರದ ಇತರ ಸದಸ್ಯರ ಅಥವಾ ಪ್ರತಿನಿಧಿಗಳ ಮತ್ತು ಡೆಲಿಗೇಟ್‌ಗಳ ಕರಡು ಪಟ್ಟಿಯನ್ನು ದಾಖಲಾತಿಗಳ ಸಹಿತ ಸಂಬಂಧಿಸಿದ ಅಪೆಕ್ಸ್ ಸಹಕಾರ ಸಂಘದ ಮುಖ್ಯಕಾರ್ಯನಿರ್ವಾಹಕರು ಜಿಲ್ಲಾ ಚುನಾವಣಾಧಿಕಾರಿಗಳಿಗೆ ಚುನಾವಣಾ ದಿನಾಂಕದ ಪೂರ್ವದ ಕನಿಷ್ಟ 60 ದಿನಗಳ ಮುಂಚಿತವಾಗಿ ಸಲ್ಲಿಸುವಿಕೆ ಬಗ್ಗೆ.<br><br>[ಕರ್ನಾಟಕ ಸಹಕಾರ ಸಂಘಗಳ ನಿಯಮ 1960ರ ನಿಯಮ 13ಡಿ(4) ಮತ್ತು (5) | ಚುನಾವಣಾ ದಿನಾಂಕಕ್ಕೆ ಪೂರ್ವದ ಕನಿಷ್ಟ 60 ದಿನಗಳ ಮುಂಚೆ ಜಿಲ್ಲಾ ಚುನಾವಣಾಧಿಕಾರಿಗಳಿಗೆ ಸಂಘದ ಮುಖ್ಯ ಕಾರ್ಯನಿರ್ವಾಹಕರು ನಿಯಮಾನುಸಾರ ಸಲ್ಲಿಸಬೇಕಾಗಿರುತ್ತದೆ. |

| | | |
|---|---|---|
| 03 | ಮೇಲೆ ನಮೂದಿಸಲಾದ ಕಂಡಿಕೆ(2)ರಲ್ಲಿ ವಿವರಿಸಿರುವಂತೆ ಕರಡು ಮತದಾರರ ಮತ್ತು ಡೆಲಿಗೇಟ್‌ಗಳ ಪಟ್ಟಿ, ಸುಸ್ತಿದಾರರ ಕರಡು ಪಟ್ಟಿ ಹಾಗೂ ಅಂತಿಮ ಮತದಾರರ ಪಟ್ಟಿಯ ಪ್ರಕಟಣೆಗೆ ನಿಗಧಿಪಡಿಸಿದ ದಿನಾಂಕದ ಪೂರ್ವದಲ್ಲಿ ಮರುಪಾವತಿಗೆ ಬಾಕಿಯಾಗುವ ಸದಸ್ಯರ ಕರಡು ಪಟ್ಟಿಗಳನ್ನು ಮತದಾನದ ಹಕ್ಕನ್ನು ಹೊಂದಿರದ ಇತರ ಸದಸ್ಯರ ಮತ್ತು ಡೆಲಿಗೇಟ್‌ಗಳ ಪಟ್ಟಿಯ ಸಂಬಂಧ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸಲ್ಲಿಸಲು ಚುನಾವಣಾ ದಿನಾಂಕಕ್ಕೆ ಪೂರ್ವದ ಕನಿಷ್ಟ 45 ದಿನಗಳ ಮುಂಚಿತವಾಗಿ ಜಿಲ್ಲಾ ಚುನಾವಣಾಧಿಕಾರಿಯು (ಡಿ.ಇ.ಓ) ಪ್ರಕಟಿಸಬೇಕಾಗಿರುತ್ತದೆ.<br><br>**[ಕರ್ನಾಟಕ ಸಹಕಾರ ಸಂಘಗಳ ನಿಯಮ-13ಡಿ(3)(ಎ)** | ಚುನಾವಣೆ ದಿನಾಂಕಕ್ಕೆ ಪೂರ್ವದ ಕನಿಷ್ಟ 45 ದಿನಗಳ ಮುಂಚೆ ಪ್ರಕಟಿಸತಕ್ಕದ್ದು. |
| 04 | ಅಂತಿಮ ಅರ್ಹ ಮತದಾರರ ಪಟ್ಟಿಯನ್ನು ಚುನಾವಣಾ ದಿನಾಂಕಕ್ಕೆ ಪೂರ್ವದ 15ನೇ ದಿನದಂದು ಅಥವಾ ಮುಂಚಿತವಾಗಿ ಪ್ರಕಟಿಸುವುದು.<br><br>**[ಕರ್ನಾಟಕ ಸಹಕಾರ ಸಂಘಗಳ ನಿಯಮ 1960ರ ನಿಯಮ-13ಡಿ(3)(ಬಿ) ರನ್ವಯ** | ಚುನಾವಣಾ ದಿನಾಂಕಕ್ಕೆ ಪೂರ್ವದ 15ನೇ ದಿನದಂದು ಅಥವಾ ಮುಂಚಿತವಾಗಿ ಪ್ರಕಟಿಸತಕ್ಕದ್ದು. |
| 05 | ಸಹಕಾರ ಚುನಾವಣಾ ಪ್ರಾಧಿಕಾರವು ಅಪೆಕ್ಸ್ ಸಹಕಾರ ಸಂಘಗಳಿಗೆ ಚುನಾವಣೆ ನಡೆಸಲು ನಿಗಧಿಪಡಿಸಿರುವ ಅಧಿಸೂಚನೆಯಂತೆ ನಿಯಮ-14ರನ್ವಯ ಜಿಲ್ಲಾ ಚುನಾವಣಾಧಿಕಾರಿಯು ನಮೂನೆ-XI ರಲ್ಲಿ ಅಧಿಸೂಚನೆ ಹೊರಡಿಸುವ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು. | ಜಿಲ್ಲಾ ಚುನಾವಣಾಧಿಕಾರಿಯು ಕರ್ನಾಟಕ ಸಹಕಾರ ಸಂಘಗಳ ನಿಯಮ-14ರನ್ವಯ ಸಾಮಾನ್ಯ ಚುನಾವಣಾ ಅಧಿಸೂಚನೆಯನ್ನು ಹೊರಡಿಸತಕ್ಕದ್ದು. |
| 06 | ಕಂಡಿಕೆ-5 ರಲ್ಲಿ ವಿವರಿಸಿದಂತೆ ಜಿಲ್ಲಾ ಚುನಾವಣಾಧಿಕಾರಿಯು ಅಧಿಸೂಚನೆ ಹೊರಡಿಸಿದ ನಂತರ ಉದ್ದೇಶಿತ ಚುನಾವಣೆಗಾಗಿ ರಿಟರ್ನಿಂಗ್ ಅಧಿಕಾರಿಯು ನಮೂನೆ-XIIರಲ್ಲಿ ಸಾರ್ವಜನಿಕ ನೋಟೀಸ್ ನೀಡತಕ್ಕದ್ದು. | ನಿಯಮ-14(3)ರಂತೆ ರಿಟರ್ನಿಂಗ್ ಅಧಿಕಾರಿಯು ಅಗತ್ಯ ಕ್ರಮವಿಡುವ ಬಗ್ಗೆ ನಿರ್ದೇಶಿಸುವುದು. |
| 07 | ಮತದಾನ ಕೇಂದ್ರಗಳನ್ನು ಗುರುತಿಸುವಿಕೆ ಮತ್ತು ಅದರ ವಿವರಗಳು. | ರಿಟರ್ನಿಂಗ್ ಅಧಿಕಾರಿಯು ಜಿಲ್ಲಾಚುನಾವಣಾಧಿಕಾರಿಗಳೊಂದಿಗೆ ಸಮಾಲೋಚಿಸಿ ಸೂಕ್ತವಾದ ಮತದಾನ ಕೇಂದ್ರಗಳನ್ನು ಸ್ಥಾಪಿಸಲು ವ್ಯವಸ್ಥೆ ಮಾಡುವುದು. |
| 08 | ಮತದಾನ ಮತಗಟ್ಟೆ ಅಧಿಕಾರಿ / ಸಿಬ್ಬಂದಿಗಳ ನೇಮಕಾತಿಗೆ ಸಂಬಂಧಿಸಿದಂತೆ. | ಕರ್ನಾಟಕ ಸಹಕಾರ ಸಂಘಗಳ ನಿಯಮ-13(ಎಫ್)ನ ಅವಕಾಶದಂತೆ ಜಿಲ್ಲಾ ಚುನಾವಣಾಧಿಕಾರಿಯು ಪ್ರತಿಯೊಂದು ಮತದಾನ ಕೇಂದ್ರಕ್ಕಾಗಿ ಒಬ್ಬ ಅಧ್ಯಕ್ಷಾಧಿಕಾರಿ (ಪ್ರಿಸೈಡಿಂಗ್) ಯನ್ನು ಮತ್ತು ತಾನು ಅವಶ್ಯವೆಂದು ಭಾವಿಸುವಂತಹ ಮತದಾನ ಸಿಬ್ಬಂದಿ (ಪೋಲಿಂಗ್ ಸ್ಟಾಫ್) ಗಳನ್ನು ನೇಮಕ ಮಾಡಬಹುದು. |

| | | |
|---|---|---|
| 09 | ಚುನಾವಣೆ ನಡೆಸುವ ಸಂಬಂಧ ಅಧಿಕಾರಿ / ಸಿಬ್ಬಂದಿಗಳಿಗೆ ತರಬೇತಿ ವ್ಯವಸ್ಥೆ ಮಾಡುವುದು. | ಪ್ರಾಧಿಕಾರವು ಈಗಾಗಲೇ ಚುನಾವಣಾ ಕೈಪಿಡಿಯನ್ನು ಒದಗಿಸಿದೆ. ಅಧಿನಿಯಮ / ನಿಯಮಗಳು / ಬೈಲಾ ಅವಕಾಶಗಳ ಸಂಬಂಧ ಅಧಿಕಾರಿ / ಸಿಬ್ಬಂದಿಗೆ ಸೂಕ್ತ ತಿಳುವಳಿಕೆ ನೀಡಲು ತರಬೇತಿಗೆ ಅಗತ್ಯ ವ್ಯವಸ್ಥೆ ಮಾಡುವುದು. |
| 10 | ಚುನಾವಣಾ ಫಲಿತಾಂಶ ಘೋಷಣೆ ಮತ್ತು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಸಲ್ಲಿಸಬೇಕಾದ ಮಾಹಿತಿ / ದಾಖಲೆಗಳನ್ನು ಸಲ್ಲಿಸುವುದು. | ನಿಯಮ-14ವೈ(2)ರನ್ವಯ ರಿಟರ್ನಿಂಗ್ ಅಧಿಕಾರಿಯು ಕ್ರಮವಿಡುವಂತೆ ಸೂಚಿಸತಕ್ಕದ್ದು. |
| 11 | ಮತಪೆಟ್ಟಿಗೆಗಳ ಮತ್ತು ಚುನಾವಣೆಗೆ ಸಂಬಂಧಪಟ್ಟ ಕಾಗದ ಪತ್ರಗಳ ಅಭಿರಕ್ಷೆ, ಪರಿವೀಕ್ಷಣೆ ಮತ್ತು ಹಾಜರುಪಡಿಸುವಿಕೆ ಹಾಗೂ ವಿಲೇವಾರಿಯ ಬಗ್ಗೆ ಕ್ರಮವಿಡುವುದು. | ನಿಯಮ-14ಎಬಿ ಮತ್ತು ನಿಯಮ-14ಎಸಿ ಹಾಗೂ ನಿಯಮ-14ಎಡಿ ಗಳ ಅವಕಾಶದಂತೆ ಹಾಗೂ ಸಹಕಾರ ಚುನಾವಣಾ ಪ್ರಾಧಿಕಾರವು ನಿರ್ದೇಶಿಸಿರುವಂತೆ ಕ್ರಮವಿಡುವ ಬಗ್ಗೆ ನೋಡಿಕೊಳ್ಳುವುದು. |
| 12 | ಪದಾಧಿಕಾರಿಗಳ ಚುನಾವಣೆ ಬಗ್ಗೆ. | ಕರ್ನಾಟಕ ಸಹಕಾರ ಸಂಘಗಳ ನಿಯಮ 1960ರ ನಿಯಮ-14ಎಜಿಯ ಅವಕಾಶದಂತೆ ಕ್ರಮವಿಡುವುದು. |
| 13 | ಮಾದರಿ ನೀತಿ ಸಂಹಿತೆ. | ಸಹಕಾರ ಚುನಾವಣಾ ಪ್ರಾಧಿಕಾರದಿಂದ ಈಗಾಗಲೇ ಹೊರಡಿಸಿರುವ ಪತ್ರ ಸಂಖ್ಯೆ : ಸಚುಅ/17/ನೀತಿಸಂಹಿತೆ/2013-14 ದಿನಾಂಕ : 03-08-2013ರ ನೀತಿ ಸಂಹಿತೆ ಪಾಲನೆಯ ಬಗ್ಗೆ ಅಗತ್ಯ ಕ್ರಮವಿಡತಕ್ಕದ್ದಾಗಿದೆ. |

**(ಎನ್.ಸಿ.ಮುನಿಯಪ್ಪ)**
ಆಯುಕ್ತರು,
ಸಹಕಾರ ಚುನಾವಣಾ ಪ್ರಾಧಿಕಾರ,
ಬೆಂಗಳೂರು.